

## ಪ್ರಾರ್ಥನೆ

## ಸೂಕ್ತಿಪ್ರಭ



**ಅಕೃಪಣಮರುಕ್‌ಶ್ರಾಂತಂ ಜೀವ್ಯಾಜ್ಜನಃ ಪುರುಷಾಯುಷಂ**
**ಭವತು ಭಗವದ್ಭಕ್ತಿಃ ದ್ವೈತಂ ವಿನಾ ಪುರುಷೋತ್ತಮೇ ।**
**ದಯಿತಭುವನೋ ವಿದ್ವದ್ಬಂಧುರ್ಗುಣೇಷು ವಿಶೇಷವಿತ್**
**ಸತತಸುಕೃತೀ ಭೂಯಾದ್ಭೂಪಃ ಪ್ರಸಾಧಿತಮಂಡಲಃ ॥ — ವೇಣೀಸಂಹಾರ, ೬-೪೬**

ಜನರು ರೋಗವಿಲ್ಲದೆ ಆಯಾಸವಿಲ್ಲದೆ ಪೂರ್ಣ ಆಯುಸ್ಸು ಹೊಂದಿ ಬಾಳಲಿ. ಎರಡೆಂಬ ಭಾವನೆಯಿಲ್ಲದೆ ವಿಷ್ಣುವಿನಲ್ಲಿ ಭಕ್ತಿ ಬೆಳೆಯಲಿ. ಅರಸನು ಪಂಡಿತರಿಗೆ ಆಸರೆಯಾಗಿ ವಿಶೇಷ ಅರ್ಹತೆಯನ್ನರಿತು ಯಾವಾಗಲೂ ಒಳ್ಳೆಯದನ್ನೇ ಮಾಡುತ್ತ ರಾಜ್ಯವನ್ನು ಆನಂದಗೊಳಿಸಲಿ.

**ಅಂಕೋಲಂ ನಿಜಬೀಜಸಂತತಿರಯಸ್ಕಾಂತೋಪಲಂ ಸೂಚಿಕಾ**
**ಸಾಧ್ವೀ ನೈಜವಿಭುಂ ಲತಾ ಕ್ಷಿತಿರುಹಂ ಸಿಂಧುಃ ಸರಿದ್ವಲ್ಲಭಂ ।**
**ಪ್ರಾಪ್ನೋತೀಹ ಯಥಾ ತಥಾ ಪಶುಪತೇಃ ಪಾದಾರವಿಂದದ್ವಯಂ**
**ಚೇತೋವೃತ್ತಿರುಪೇತ್ಯ ತಿಷ್ಠತಿ ಸದಾ ಸಾ ಭಕ್ತಿರಿತ್ಯುಚ್ಯತೇ ॥ — ಶಿವಾನಂದಲಹರೀ**

ಅಂಕೋಲೆ ಮರದ ಬೀಜಗಳು ಆ ಮರವನ್ನೂ, ಸೂಜಿ ಸೂಜಿಗಲ್ಲನ್ನೂ, ಪತಿವ್ರತೆ ತನ್ನ ಪತಿಯನ್ನೂ, ಬಳ್ಳಿಯು ಮರವನ್ನೂ, ನದಿ ಸಾಗರವನ್ನೂ ಹೇಗೆ ಸೇರುವುವೋ ಹಾಗೆ ನನ್ನ ಚಿತ್ತವೃತ್ತಿಯೂ ಸಹ, ಹೇ ಪಶುಪತಿಯೇ, ನಿನ್ನ ಪಾದಕಮಲಗಳನ್ನು ಸೇರಿ ಎಂದೆಂದೂ ಅಲ್ಲೇ ನಿಲ್ಲುತ್ತದೆ. ಅದನ್ನೇ ಭಕ್ತಿ ಎನ್ನುತ್ತಾರೆ.

**ಅವಿವೇಕಘನಾಂಧದಿಙ್ಮುಖೇ**
**ಬಹುಧಾ ಸಂತತದುಃಖವರ್ಷಿಣೀ ।**
**ಭಗವನ್ ಭವದುರ್ದಿನೇ ಪಥ-**
**ಸ್ಖಲಿತಂ ಮಾಮವಲೋಕಯಾಚ್ಯುತ ॥ — ಸ್ತೋತ್ರರತ್ನ**

ಅಜ್ಞಾನವೆಂಬ ದಟ್ಟವಾದ ಕತ್ತಲೆಯ ದಾರಿಯಲ್ಲಿ ಅನೇಕ ರೀತಿಯಾಗಿ ಸಂತತವಾಗಿ ದುಃಖದ ಮಳೆ ಸುರಿಯುತ್ತಿರುವ, ಸಂಸಾರವೆಂಬ ಈ ಮೋಡ ಮುಚ್ಚಿದ ದಿನದಂದು ದಾರಿತಪ್ಪಿದ ನನ್ನ ಮೇಲೆ, ಹೇ ಅಚ್ಯುತ, ಭಗವನ್, ದಯೆಯಿಟ್ಟು ಕಟಾಕ್ಷವನ್ನು ಬೀರು.

---

☛ ಗುರಿಯತ್ತ ಸಾಗುವ ಆಕಾಂಕ್ಷೆಯನ್ನು ಜಾಗ್ರತಗೊಳಿಸಿ, ಸುಪ್ತವಾಗಿರುವ ಅಂತಃಶಕ್ತಿಯನ್ನು ಮುಕ್ತವಾಗಿ ಪ್ರಕಟಿಸಲು ಪ್ರೇರೇಪಣೆ ನೀಡಿ, ಜನರು ಸಫಲತೆಯನ್ನು ಕಾಣುವಂತೆ ಮಾಡುವವನೇ ನಿಜವಾದ ಮುಖಂಡ. —ಡೇವಿಡ್ ಗರ್ಗನ್

☛ ಜೀವನ ವಿಜ್ಞಾನವಲ್ಲ; ನಾವು ಬೆಳೆದಂತೆ ಅದನ್ನು ರೂಪಿಸಿಕೊಳ್ಳುತ್ತೇವೆ. —ಆಲ್ ಹಿರ್‌ಶ್ಫೀಲ್ಡ್

☛ ಯಾವುದನ್ನು ಉಪೇಕ್ಷಿಸಬೇಕು ಎಂದು ತಿಳಿಯುವುದರಲ್ಲೇ ಬುದ್ಧಿವಂತಿಕೆ ಇರುವುದು. —ವಿಲಿಯಂ ಜೇಮ್ಸ್

☛ ಜೀವನದುದ್ದಕ್ಕೂ ಜಟಿಲತೆಗಳು ಇದ್ದೇ ಇರುತ್ತವೆ. ನಾವು ಹುಟ್ಟಿದಾಗಲೂ ನಮ್ಮನ್ನು ಬಂಧಿಸಿ ಹಿಡಿದಿಟ್ಟ ಹೊಕ್ಕಳು ಬಳ್ಳಿ ಇರುವುದಿಲ್ಲವೇ! — ಜಾಯ್ಸ್ ಬ್ರಾಥರ್ಸ್

☛ ಮುಳ್ಳುಗಳು ಚುಚ್ಚುವುದೆಂಬ ಭಯದಿಂದ ದುರ್ಬಲರು ಗುಲಾಬಿ ಹೂಗಳನ್ನು ಸಂಗ್ರಹಿಸುವುದಿಲ್ಲ. ಆದರೆ ದೃಢ ಸಂಕಲ್ಪವಿರುವ ಧೀರರಿಗೆ ತಿಳಿದಿದೆ, ಉತ್ತಮ ಹೂಗಳನ್ನು ಪಡೆಯಬೇಕಾದರೆ ಮುಳ್ಳುಗಳಿಂದ ಕೆಲವೊಮ್ಮೆ ಚುಚ್ಚಿಸಿಕೊಳ್ಳಬೇಕಾಗುತ್ತದೆ ಎಂದು. —ಜೋಸ್ ಇನ್‌ಜೀನಿರಸ್

☛ ನಾವೊಂದು ತಪ್ಪು ಮಾಡಿದರೆ ಜಗತ್ತೇನೂ ನಿಂತು ಹೋಗುವುದಿಲ್ಲ. —ಲೀಸಾ ಕುಡ್ರೊ

☛ ಗೊಡ್ಡು ಹರಟೆ ಅಪನಂಬಿಕೆಯನ್ನು ಪ್ರೇರೇಪಿಸುತ್ತದೆ. ಮತ್ತೊಬ್ಬರ ಬಗ್ಗೆ ನಮ್ಮೊಡನೆ ಕೀಳಾಗಿ ಮಾತನಾಡುವವರು ನಮ್ಮ ಬಗ್ಗೆ ಇತರರೊಂದಿಗೆ ಕೂಡ ಹಾಗೆ ಮಾತನಾಡುವುದಿಲ್ಲ ಎಂದು ಹೇಗೆ ನಂಬುವುದು? —ಕ್ರಿಸ್ಟೀನಾ ಸೌಸಾ

☛ ಒಳ್ಳೆಯ ಮನೆತನದಿಂದ ಹುಟ್ಟಿ ಬಂದ ವ್ಯಕ್ತಿ ಒರಟಾಗಿ ನಡೆದುಕೊಂಡರೆ ಜನ ಅಂತಹ ಕುಲದಲ್ಲಿ ಇವನ ಜನ್ಮವು ಆಗಿರಲಾರದೆಂದೇ ಭಾವಿಸುತ್ತಾರೆ. —ತಿರುಕ್ಕುರಳ್